ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ|| 1903—1904ನೆ ಇಸವಿ ವಿ॥ ಅರ್ಜೀ ನಂಬರ್ 212.

ಅರ್ಜೀದಾರು) ಶಿಡ್ಲಘಟ್ಟದ ತಾಲ್ಲೂಕು ಮುಮ್ಮನಪಲ್ಲಿಯಲ್ಲಿ ಇರುವ ಜಮೀರಾನುಯ್ಯ, ಮೈನರಾದ ಚಿಕ್ಕಬಳ್ಳಾಪುರದಲ್ಲಿ ಇದ್ದ ವೇಡಾ ವೆಂಗಟರಾಮುಯ್ಯನ ದತ್ತು ಮಗನಾದ ಜಲೀನುಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಜಲೀನಯ್ಯನಿಗೆ ಆಂಣನು ಆಗಬೇಕೆಂಬ ಹಕ್ಕಿನ ಮೇಲೆ ಮೇಲ್ಕಂಡ ಅರ್ಜೀದಾರನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ|| 1903ನೆ ಇಸವಿ ನವೆಂಬರ್ 6ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ|| 1903ನೆ ಇಸವಿ ಅಕ್ಟೋಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿತ್ತೆ.

ಪಿ. ಸಿಂಗ್ಯಾಚಾರ್, ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ|| 1903—1904ನೆ ಇಸವಿ ಅರ್ಜೀ ನಂಬರು 123.

ಮೃತಪಟ್ಟ ತಿಮ್ಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕಡೂರು ಡಿಸ್ಟ್ರಿಕ್ಟ್ ಕೊಪ್ಪದ ತಾಲ್ಲೂಕು ಹರಿಹರಪುರದಲ್ಲಿರುವ ತಿಮ್ಮಪ್ಪನವರ ಮಗ ಭೀಮರಾವು, ಮೃತಪಟ್ಟ ತಿಮ್ಮಪ್ಪನವರಿಗೆ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಕೊಪ್ಪದ ತಾಲ್ಲೂಕು ಹರಿಹರಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮಪ್ಪನವರ ಜೀವದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ|| 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭೀಮರಾವುಯವರ ಅರ್ಜಿಯನ್ನು ಸ|| 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1903ನೆ ಇಸವಿ ಅಕ್ಟೋಬರ್ ತಿಂಗಳು 27ನೆ ತಾರೀಖಿನಲ್ಲಿ ಕೋರ್ಟು ವೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ|| 1903—1904ನೆ ಇಸವಿ ಅರ್ಜೀ ನಂಬರ್ 163.

ಮೃತಪಟ್ಟ ಸಗನೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಮಳಲೂರು ಮಾಗಣಿ ಕಂಬೀಹಳ್ಳಿಲಿರುವ ದೇವೀರೇಗೌಡ ವೈನರ್, ಗಾರ್ಡಿಯರ್ ತಾಯಿ ಈರಮ್ಮ, ಮೃತಪಟ್ಟ ಸಗನೆಗೌಡನಿಗೆ ವೈನರ್ ದೇವೀರೆಗೌಡ ಮಗನಾಗಿಯೂ ಈತನ ತಾಯಿ ಈರಮ್ಮ ಹೆಂಡತಿ ಎಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮಳಲೂರು ಮಾಗಣಿ ಕಂಬೀಹಳ್ಳಿ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಗನೆಗೌಡನವರ ಜೀವದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ದೇವೀರೆಗೌಡ ವೈನರ್, ಗಾರ್ಡಿಯರ್ ತಾಯಿ ಈರಮ್ಮನವರ ಅರ್ಜಿಯನ್ನು ಸ|| 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಗನೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯು ಪಡಿಸಿ ಇದೆ.

ಸ|| 1903ನೆ ಇಸವಿ ಅಕ್ಟೋಬರ್ 26ನೆ ತಾರೀಖಿನಲ್ಲಿ ಕೋರ್ಟು ವೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್.

ತಾರೀಖು 7ನೆ ಅಕ್ಟೋಬರು 1903.

ಮೆಸ್ಸರ್ಸ್ ಲಾಂಗ್‌ಮ್ಯಾನ್ಸ್ ಗ್ರೀನ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಈ ಕೆಳಗಡೆ ನಮೂದಿಸಿರುವ ಹೊರಗಡೆ ಆಕಾರವನ್ನು ಮಾತ್ರ ತೋರಿಸುವ (Out line maps) ವ್ಯಾಪಾರಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ ಬುದಕ್ಕೆ ನ[illegible] ಕಾಸುಗಳು :—

ಯೂರೋಪ್— ವರ್ಲ್ಡ್—ಏಷಿಯಾ—ಇಂಗ್ಲೆಂಡ್ ಮತ್ತು ವೇಲ್ಸ್—ಸ್ಕಾಟ್‌ಲೆಂಡ್—ಮತ್ತು ಇಂಡಿಯಾ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.